**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.**

**CC No. 914/2024**

**CW-8 PW-3**

ಸಾಕ್ಷಿದಾರರ ಹೆಸರು : ಯಮುನೂರ್ ಸಾಬ್ ಹೋಸಮನಿ

ತಂದೆಯ ಹೆಸರು : ಅಲಿಮ್ ಸಾಬ್

ವಯಸ್ಸು : 45 ವರ್ಷ

ಉದ್ಯೋಗ : ಅಬಕಾರಿ ನೀರಿಕ್ಷಕರು

ವಾಸಸ್ಥಳ : ಮಾನ್ವಿ

ದಿನಾಂಕ 04.06.2026 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು 2024 ರಿಂದ ಇಲ್ಲಿಯವರೆಗೆ ಮಾನ್ವಿ ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತಾ ಇರುತ್ತೇನೆ.

ದಿನಾಂಕ 20-05-2024 ರಂದು ಈ ಪ್ರಕರಣದ ಕಡತವನು ಚಾಸಾ-1 ರಿಂದ ಪಡೆದುಕೊಂಡು , ಈ ಪ್ರಕರಣದಲ್ಲಿ ಇರುವ ರಾಸಾಯನಿಕ ಮಾದಕವನ್ನು ರಾಸಾಯನಿಕ ಪರೀಕ್ಷೆಗೆ ಕುಳಹಿಸಿ ಚಾಸಾ-6 ರವರಿಂದಿ ವರದಿ ಪಡೆದುಕೊಂಡಿರುತ್ತೇನೆ ಅವರ ವರದಿಯನ್ನು ಪಡೆದುಕೊಂಡು ವಾಹನದ ಮಾಲೀಕತ್ವದ ಬಗ್ಗೆ ಪರೀಶೀಲನ ಪತ್ರವನ್ನು ಬರೆದು ಸ್ವೀಕರಿಸಿಕೊಂಡು ನಂತರ ಆರೋಪಿ ವಿರುದ್ದ ಸಾಕ್ಯಧಾರಗಳು ಲಭ್ಯವಾಗಿದ್ದರಿಂದ ಆರೋಪಿ ವಿರುದ್ದ ದೋ.ರೋಪಣ ಪಟ್ಟಿ ಸಲ್ಲಿಸಿರುತ್ತೇನೆ . ಸಾಕ್ಷಿ ರಾಸಾಯನಿಕ ಮಾದಕಗಳನ್ನು ಗುರುತಿಸಿದ್ದು ಅವುಗಳನ್ನು ಈಗ ಮು ಮಾ-1 ರಿಂದ 6 ಎಂದು ಗುರುತಿಸಲಾಯಿತು. ಸದರಿ ರಾಸಾಯನಿಕ ವರದಿ ನೋಡುತ್ತಿದ್ದು ಅದನ್ನು ಈಗ ನಿಪಿ- 2 ಎಂದು ಸಾಕ್ಷಿ ಸಹಿ ಇಲ್ಲದ ಇರುವುದರಿಂದ ನಿಶಾನೆಗೊಳಿಸಿರುವುದಿಲ್ಲ. ಮಾನಿಲೀಕತ್ವ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು ಅದನ್ನುನಿಪಿ-3 ಎಂದು ಸಾಕ್ಷಿ ಸಹಿ ಇಲ್ಲದ ಇರುವುದರಿಂದ ನಿಶಾನೆಗೊಳಿಸಿರುವುದಿಲ್ಲ.

**ಪಾಟೀ ಸವಾಲು ಮಾನ್ಯ ಆರೋಪಿ ಪರ ಮಾನ್ಯ ವಕೀಲರಿಂದ:**

1. ನಾನಾ ಈ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಈ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಕೇಸಿಗೆ ಅನುಕೂಲವಾಗುವ ರೀತಿ ಬೇರೆ ಪ್ರಕರಣದ ಮುದ್ದೆ ಮಾಲನ್ನು ಈ ಪ್ರಕರಣಕ್ಕೆ ಅಳವಡಿಸಿಕೊಂಡು ಸುಳ್ಳು ರಾಸಾಯನಿಕ ವರದಿ ಮತ್ತು ಮಾಲೀಕತ್ವದ ಪ್ರಮಾಣ ಪತ್ರವನು ತಯಾಸಿಕೊಂಡು ಠಾಣೆ ಆಂಕಿ ಸಂಖ್ಯೆಗೊಸ್ಕರ ಆರೋಪಿತರ ವಿರುದ್ದ ಸುಳ್ಳು ದೋ. ಪಟ್ಟ ತಯಾರಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ..

**ಮರು ವಿಚಾರಣೆ: ಇಲ್ಲ;**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

ಪ್ರ.ದ.ನ್ಯಾ.ದಂ.ಗಳು, ಮಾನ್ವಿ